ದಾಸ್ತಾನು ಗೊತ್ತಾದ ಮೊಬಲಗಿಗಿಂತ ಕಡಮೆ ಬೀಳುವ ಸಂದರ್ಭವನ್ನು ಸ್ಟ್ಯಾಂಪ್ ಸೂಪರಿಟೆಂಡೆಂಟ್ ಸ್ಟ್ಯಾಂಪು ಕಮಿಷನರ ಅವಧಾನಕ್ಕೆ ತರುವುದು ಅವರ ಕರ್ತವ್ಯಗಳಲ್ಲಿ ಬಂದಾಗಿರುವುದು. ಸ್ಟ್ಯಾಂಪ್ ಸೂಪರಿಟೆಂಡೆಂಟಗೆ ಸ್ಟ್ಯಾಂಪಿಗಾಗಿ ದರ ಖಾಸ್ತಾಗಳನ್ನು ಕಳುಹಿಸಿದಾಗ ಇವರು ಜಾಗ್ರತೆಯಾಗಿ ಸ್ಟ್ಯಾಂಪುಗಳನ್ನು ಕಳುಹಿಸದೇ ಹೋದರೆ ಆ ಸಂಗತಿಯನ್ನು ಕುರಿತು ಸ್ಟ್ಯಾಂಪ್ ಕಮಿಷನರಿಗೆ ಡಿಸ್ಟ್ರಿಕ್ಟ್ ಸ್ಟ್ಯಾಂಪ್ ಆಫೀಸರು ರಿಪೋರ್ಟ್ ಮಾಡತಕ್ಕದ್ದು. ಯಾವುದಾದರೂ ಬಂದು ಬ್ರಾಂಚ್ ಡಿಪೋವಿನಲ್ಲಿಡತಕ್ಕ ಬಗ್ಗೆ ಸರಬರಾಯಿ ಮಾಡುವ ಸ್ಟ್ಯಾಂಪುಗಳು ಅಲ್ಲಿ ಮೂರು ತಿಂಗಳಿಗೆ ಖರ್ಚಾಗುವಷ್ಟಕ್ಕೆ ಸರಿಯಾಗಿರಬೇಕೆಂತ ಹುಕುಂ ಮಾಡಲು ಸ್ಟ್ಯಾಂಪ್ ಕಮಿಷನರಿಗೆ ಅಧಿಕಾರವಿರುತ್ತದೆ.

9. ಸ್ಟ್ಯಾಂಪುಗಳ ಅಜಮಾಯಿಷಿ ಕೆಲಸವು ಎಷ್ಟರವಟ್ಟಿಗೆ ಕ್ರಮವಾಗಿ ನಡೆದಿದೆ ಎಂಬುದನ್ನು ಸರ್ಕಾರದವರು ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಸ್ಟ್ಯಾಂಪಿನ ಅಜಮಾಯಿಷಿ ಕೆಲಸವು ಎಷ್ಟು ನಡೆದಿದೆ ಇನ್ನೆಷ್ಟು ನಡೆಯದೆ ನಿಂತಿದೆ ಎಂಬದನ್ನು ತೋರಿಸುವ ಒಂದು ಪಟ್ಟಿಯನ್ನು ಸ್ಟ್ಯಾಂಪ್ ಕಮಿಷನರು (ಪ್ರತಿ ವರ್ಷದ ಅಕ್ಟೋಬರ್ ಮೊದಲನೆ ತಾರೀಖಿನ ಬಳಗಾಗಿ) ಕಳುಹಿಸಬೇಕಾದ ವರ್ಷಗಟ್ಟಲೆ ರಿಪೋರ್ಟಿಗೆ ಲಗತ್ತು ಮಾಡಿ ಕಳುಹಿಸಬೇಕು.

ಹುಕುಂ ಬವೋಜೇಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 12ನೆ ಜೂ॥ 1907.

ನಂ. 542—4263, ಮೈಸೂರು ಡಿವೀಜನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜನಿಯರ್ ಮೆ॥ ವಿ. ವಿ. ಕರ್ವೀಎ ಲ್. ಸಿ. ಇ., ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷ್ಯ 177ನೆ ಆರ್ಟಿಕಲ್ ಅನುಸರಿಸಿ ಸ॥ 1907ನೆ ಮೇ 20ನೆ ತಾರೀಖಿನಿಂದ 1 ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ತಾರೀಖು 14ನೆ ಜೂ॥ 1907.

ನಂ. 552—4325, ಮೈಸೂರು ಡಿವೀಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಮಿ॥ ಬಿ. ಸುಬ್ಬರಾವ್, ಎಲ್. ಸಿ. ಇ., ಯವರಿಗೆ ಸ॥ 1907ನೆ ಏಪ್ರಿಲ್ 18ನೆ ತಾರೀಖಿನ 366-2780ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 1 ತಿಂಗಳು 15 ದಿನಗಳ ಪ್ರಿವಿಲೇಜ್ ರಜದ ಪೈಕಿ ಅವರು ಒಂದು ತಿಂಗಳು ಉಪಯೋಗಿಸಿಕೊಂಡು ಜೂ॥ ತಿಂಗಳು 4ನೆ ತಾರೀಖಿನ ಮಧ್ಯಾಹ್ನ ಕೆಲಸದ ಮೇಲೆ ಹಾಜರಾದ್ದರಿಂದ ಉಪಯೋಗಿಸಿಕೊಳ್ಳದ 15 ದಿನಗಳ ಪ್ರಿವಿಲೇಜ್ ರಜವನ್ನು ರದ್ದು ಮಾಡಲ್ಪಟ್ಟಿದೆ.

ತಾರೀಖು 15ನೆ ಜೂ॥ 1907.

ನಂ. 557—4382, ಮೈಸೂರು ಕಂಟ್ರೋಲರ್ ಆಫೀಸಿನ ಪಬ್ಲಿಕ್ ವರ್ಕ್ಸ್ ಮತ್ತು ರೈಲ್ವೆ ಬ್ರಾಂಚಿನ ಅಸಿಸ್ಟೆಂಟ್ ಎಗ್ಜಾಮಿನರ್ ಮೆ॥ ಎ. ಅಪ್ಪಾವು ಮೊದಲಿಯಾರ್ ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷ್ಯ 177ನೆ, ಆರ್ಟಿಕಲ್ ಅನುಸರಿಸಿ ಸ॥ 1907ನೆ ಜೂ॥ 17ನೆ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 13 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಹುಕುಂ ಬವೋಜೇಬ್,
ಡಬ್ಲ್ಯೂ. ಮೆಕ್‌ಹಬೀ,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್‌ಮೆಂಟ್ ಸೆಕ್ರಿಟರಿ.